ದಿಃ 20-10-2014ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಶ್ರೀ ಕೆ.ಬಿ.ಆರ್ ವಕೀಲರಿಂದಃ

ದಿಃ 04.03.2002 ರಂದು ನಾನು ಸಲ್ಲಿಸಿದ ಪ್ರಮಾಣಪತ್ರದ 2ನೇ ಖಂಡಿಕೆಯಲ್ಲಿ ಈ ಕೇಸಿನ ಪ್ರತಿವಾದಿ ಸಲ್ಲಿಸಿದ ಪ್ರತಿವಾದ ಪತ್ರ ಮತ್ತು ಟಿ. ಶ್ರೀಕಾಂತ ಹೊಳ್ಳ ಅವರು ಸಲ್ಲಿಸಿದ ಪ್ರಮಾಣಪತ್ರವನ್ನು ಓದಿ ತಿಳಿದುಕೊಂಡಿರುತ್ತೇನೆ ಎಂದು ಹೇಳಿರುತ್ತೇನೆ ಎಂದರೆ ಸರಿ. ಟಿ. ಶ್ರೀಕಾಂತ ಹೊಳ್ಳ ಅವರು ಸಲ್ಲಿಸಿರುವ ಪ್ರಮಾಣಪತ್ರ ನಿಜವೋ ಸುಳ್ಳೋ ನನಗೆ ಗೊತ್ತಿಲ್ಲ. ಶ್ರೀಕಾಂತ ಹೊಳ್ಳ ಅವರು ಸಲ್ಲಿಸಿದ ಪ್ರಮಾಣಪತ್ರವನ್ನು ಓದಲು ವಕೀಲರಾದ ಶ್ರೀ ಬಿ.ಎನ್ ನಾಗರಾಜ ಅವರು ಹೇಳಿದ್ದರು. ಸದ್ರಿ ಟಿ. ಶ್ರೀಕಾಂತ ಹೊಳ್ಳ ಅವರು ಸಲ್ಲಿಸಿದ ಪ್ರಮಾಣಪತ್ರವನ್ನು ಓದಲು ನಾನು ಈ ಮೊಕದ್ದಮೆಯಲ್ಲಿ ಮೊದಲ ಬಾರಿ ಸಾಕ್ಷ್ಯ ನುಡಿದ ನಂತರ ವಕೀಲರಾದ ಬಿ.ಎನ್ ನಾಗರಾಜ ಅವರು ಹೇಳಿರುತ್ತಾರೆ. ಅದಕ್ಕಿಂತ ಮೊದಲು ನಾನು ಶ್ರೀಕಾಂತ ಹೊಳ್ಳ ಅವರು ಸಲ್ಲಿಸಿದ ಪ್ರಮಾಣಪತ್ರವನ್ನು ಓದಿ ನೋಡಿರುವುದಿಲ್ಲ. ಶ್ರೀಕಾಂತ ಹೊಳ್ಳ ಅವರು ಸಲ್ಲಿಸಿದ ಪ್ರಮಾಣಪತ್ರದ ದೃಢೀಕೃತ ಪ್ರತಿಯನ್ನು ನಾನು ಓದಿ ನೋಡಿರುತ್ತೇನೆ. ಈಗ ಸಾಕ್ಷಿಗೆ ದಿಃ 29.12.2000ದಂದು ಟಿ. ಶ್ರೀಕಾಂತ್ ಹೊಳ್ಳ ಅವರು ಈ ಕೇಸಿನಲ್ಲಿ ಸಲ್ಲಿಸಿದ ದೃಢೀಕೃತ ಪ್ರಮಾಣಪತ್ರವನ್ನು ತೋರಿಸಿ ಇದೇ ತರಹದ ಪ್ರಮಾಣಪತ್ರವನ್ನು ನೀವು ಓದಿ ನೋಡಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ಹೌದು ಎಂದು ಉತ್ತರಿಸುತ್ತಾರೆ. ನಾನು ಹೇಳಿದ ವಕೀಲರಾದ ನಾಗರಾಜ ಎಂಬುವವರು ಈ ದಿನ ನ್ಯಾಯಾಲಯದಲ್ಲಿ ಹಾಜರಿರುತ್ತಾರೆ. ಅವರು ಈ ದಾವೆಯಲ್ಲಿ ವಾದಿ ಅಥವಾ ಪ್ರತಿವಾದಿ ಪರ ವಕೀಲರಲ್ಲ ನನ್ನ ಪರವಾಗಿ ನೇಮಿಸಿಕೊಂಡ ವಕೀಲರಾಗಿರುತ್ತಾರೆ. ಈ ಕೇಸಿನ ಮುದ್ದತ್ತು ದಿನಾಂಕವನ್ನು ನನಗೆ ತಿಳಿಸುವ ಉದ್ದೇಶಕ್ಕಾಗಿ ಅವರನ್ನು ನನ್ನ ವಕೀಲರನ್ನಾಗಿ ನೇಮಿಸಿಕೊಂಡಿದ್ದೆ. ಪ್ರತಿವಾದಿ ಅವರು ಮಧ್ಯಂತರ ಅರ್ಜಿ 2ರ ಮೇಲೆ ಸಲ್ಲಿಸಿದ ಎದುರು ಪ್ರಮಾಣಪತ್ರವನ್ನು ನಾನು ಓದಿ ನೋಡಿಲ್ಲ. ನೀವು ಸಲ್ಲಿಸಿದ ಪ್ರಮಾಣಪತ್ರದಲ್ಲಿ ದಿಃ 13.09.1988ರ ಮರಣಶಾಸನದ ಬಗ್ಗೆ ಹೇಳಿರುವುದನ್ನು ಬಿಟ್ಟರೆ ಬೇರೆ ಏನಾದರೂ ಹೇಳುವುದು ಇದೆಯಾ ಎಂಬ ಪ್ರಶ್ನೆಗೆ ಸಾಕ್ಷಿಯು ಸದ್ರಿ ಮರಣಶಾಸನಕ್ಕೆ ನಾನು ಸಾಕ್ಷಿಯಾಗಿ ರುಜು ಮಾಡಿಲ್ಲ ಮತ್ತು ಬೈಕು ಪೂಜಾರಿಯವರಿಗೆ ಸದ್ರಿ ಮರಣಶಾಸನವನ್ನು ಬರೆಯುವ ಸಂದರ್ಭ ಬಂದಿರಲಿಲ್ಲ ಎಂದು ಉತ್ತರಿಸುತ್ತಾರೆ. ಬೈಕು

ಪೂಜಾರಿಯವರಿಗೆ ಮರಣಶಾಸನ ಬರೆಯುವ ಸಂದರ್ಭ ಬಂದಿರಲಿಲ್ಲ ಎಂಬ ವಿಚಾರವನ್ನು ನನ್ನ ಪ್ರಮಾಣಪತ್ರ ಸಲ್ಲಿಸುವ ಸಂದರ್ಭದಲ್ಲಿ ವಕೀಲರಾದ ಹೆಚ್.ಎನ್.ಶೆಟ್ಟಿಯವರಿಗೆ ತಿಳಿಸಿರಲಿಲ್ಲ ಮತ್ತು ನನ್ನ ಪ್ರಮಾಣಪತ್ರದಲ್ಲಿಯೂ ಸಹಾ ಕಾಣಿಸಿರಲಿಲ್ಲ. ವಕೀಲರಾದ ಹೆಚ್.ಎನ್.ಶೆಟ್ಟಿ ಏನು ಕೇಳಿರುತ್ತಾರೋ ಅದಕ್ಕೆ ಮಾತ್ರ ನಾನು ಹೇಳಿ ಪ್ರಮಾಣಪತ್ರ ಸಿದ್ಧಪಡಿಸಿರುತ್ತೇನೆ. ವಕೀಲರಾದ ಹೆಚ್.ಎನ್.ಶೆಟ್ಟಿಯವರಿಗೆ ದಾವಾ ಶೆಡ್ಯೂಲ್ ಸೊತ್ತುಗಳಿಗೆ ಸಂಬದಪಟ್ಟಂತೆ ವೈಯಕ್ತಿಕ ಹಿತಾಸಕ್ತಿ ಇತ್ತೋ ಇಲ್ಲವೋ ನನಗೆ ಗೊತ್ತಿಲ್ಲ. 04.03.2002ರ ಪ್ರಮಾಣಪತ್ರವನ್ನು ಯಾರಿಗೂ ಸಹಾಯ ಮಾಡುವ ಉದ್ದೇಶದಿಂದ ಸಲ್ಲಿಸಿಲ್ಲ. ಇದ್ದ ಸಂಗತಿಯನ್ನು ಹೇಳುವ ಸಲುವಾಗಿ ಸಲ್ಲಿಸಿರುತ್ತೇನೆ. ಟಿ. ಶ್ರೀಕಾಂತ ಹೊಳ್ಳ ಎಂಬುವವರು ಯಾರು ಎಂಬುದು ಇಲ್ಲಿಯವರೆಗೂ ನನಗೆ ಗೊತ್ತಿಲ್ಲ. ಟಿ. ಶ್ರೀಕಾಂತ ಹೊಳ್ಳ ಅವರ ಬಗ್ಗೆ ನನ್ನ ವಕೀಲರನ್ನು ಕೇಳಿದಾಗ ಅವರು ಪತ್ರ ಬರಹಗಾರರು ಎಂದು ತಿಳಿಸಿದ್ದರು. ಟಿ. ಶ್ರೀಕಾಂತ ಹೊಳ್ಳ ಅವರು ಪತ್ರ ಬರಹಗಾರರು ಎಂದು ಗೊತ್ತಾದ ನಂತರ ಅವರ ಕಚೇರಿಗೆ ಹೋಗಿ ನಾನು ವಿಚಾರಿಸಲಿಲ್ಲ. ಅದರ ಅಗತ್ಯತೆ ನನಗೆ ಇರಲಿಲ್ಲ. 04.03.2002ರ ಪ್ರಮಾಣಪತ್ರವನ್ನು ಸಲ್ಲಿಸುವ ಬಗ್ಗೆ ವಾದಿಗಳ ಪೈಕಿ ನನ್ನ ಹೆಂಡತಿ ಹೇಳಿದ್ದಳು. ನಾನು ನನ್ನ ಹೆಂಡತಿ ಪರವಾಗಲೀ ಅಥವಾ ಬೇರೆ ಯಾರ ಪರವಾಗಲೀ ಸಾಕ್ಷಿ ನುಡಿಯಲು ಬಂದಿರುವುದಿಲ್ಲ. ನಾನಾಗಿಯೇ ಬಂದಿರುತ್ತೇನೆ. ಬೈಕು ಪೂಜಾರಿಯವರು ದಿಃ 13.09.1988ರ ಮರಣಶಾಸನ ಬರೆದ ಸಂದರ್ಭದಲ್ಲಿ ನಾನು ಶಿವಮೊಗ್ಗದ ಕೆನರಾ ಬ್ಯಾಂಕ್ ಶಾಖೆಯಲ್ಲಿ ಮ್ಯಾನೇಜರ್ ಆಗಿದ್ದೆ ಎಂದರೆ ಸರಿಯಲ್ಲ. ಆದರೆ ನಾನು ಮದ್ರಾಸ್‌ನಲ್ಲಿ ಕೆಲಸದಲ್ಲಿದ್ದೆ. 1988ರ ಆಗಸ್ಟ್ 2ನೇ ವಾರದಿಂದ 1988 ಸೆಪ್ಟೆಂಬರ್ 3ನೇ ವಾರದವರೆಗೆ ಅನಾರೋಗ್ಯದ ನಿಮಿತ್ತ ನಾನು ರಜೆಯ ಮೇಲಿದ್ದೆ. ಆ ಸಂದರ್ಭದಲ್ಲಿ ನಾನು ಕಟಪಾಡಿಯ ನನ್ನ ಮನೆಯಲ್ಲಿ ಇದ್ದೆ. ಆ ಸಮಯದಲ್ಲಿ ನನ್ನ ಜೊತೆ ನನ್ನ ಹೆಂಡತಿ ಮಕ್ಕಳು ಸಹಾ ಇದ್ದರು. ನಾನು ರಜೆ ಸಲ್ಲಿಸಲು ನನ್ನ ರಜಾ ಅರ್ಜಿ ಜೊತೆ ವೈದ್ಯಕೀಯ ಪ್ರಮಾಣಪತ್ರವನ್ನು ಸಲ್ಲಿಸಿದ್ದೆ. ಆ ಸಂದರ್ಭದಲ್ಲಿ ನನಗೆ ಹೊಟ್ಟೆನೋವು ಮತ್ತು ತಲೆ ಸುತ್ತುವ ಕಾಯಿಲೆ ಇತ್ತು. ವೈದ್ಯರಾದ ಡಾ. ಕೆ.ಆರ್.ಕೊರಡ್ಕಲ್ ಅವರು ನನ್ನ ಕಾಯಿಲೆಗೆ ಸಂಬಂದಪಟ್ಟಂತೆ ಪ್ರಮಾಣಪತ್ರ ನೀಡಿದ್ದರು. ನಾನು ಅನಾರೋಗ್ಯದಿಂದ ಕಟಪಾಡಿಯಲ್ಲಿದ್ದಾಗ ನನ್ನನ್ನು ನೋಡಲು ವಾದಿಗಳಾಗಲೀ ಅಥವಾ ಪ್ರತಿವಾದಿಯಾಗಲೀ ಬಂದಿರಲಿಲ್ಲ. ನಾನು ಬ್ಯಾಂಕ್ ಮ್ಯಾನೇಜರ್

ಆಗಿದ್ದಾಗ ದಾಖಲೆಗಳನ್ನು ಓದಿ ಗೊತ್ತು ಮಾಡಿಕೊಂಡ ನಂತರ ಸಹಿ ಮಾಡುತ್ತೇನೆ. ನಮ್ಮವರ ಪೈಕಿ ಎಡಗೈ ಹೆಬ್ಬೆಟ್ಟಿನ ಗುರುತುಗಳನ್ನು ತೋರಿಸಿದರೆ ಅದು ಯಾರ ಹೆಬ್ಬೆಟ್ಟಿನ ಗುರುತು ಎಂಬುದನ್ನು ನನಗೆ ಹೇಳಲು ಆಗುವುದಿಲ್ಲ.

ಪ್ರತಿವಾದಿ ಪರ ವಕೀಲರು ಸಾಕ್ಷಿಯು ದಿಃ 16.08.2014ರಂದು ಈ ನ್ಯಾಯಾಲಯದಲ್ಲಿ ಪಾಟೀಸವಾಲಿಗೆ ಒಳಪಟ್ಟ ಸಂದರ್ಭದಲ್ಲಿ ದಿಃ 13.09.1988ರ ಮರಣಶಾಸನ ಹೆಚ್.ಎನ್.ಶೆಟ್ಟಿ ವಕೀಲರ ಕಚೇರಿಯಲ್ಲಿ ತಾನು ಓದಿದ ಮರಣಶಾಸನದ ಜೆರಾಕ್ಸ್ ಪ್ರತಿಯ ಮೂಲಪ್ರತಿ ಇರುತ್ತದೆ ಎಂದು ಒಪ್ಪಿಕೊಂಡಿರುವುದರಿಂದ ಸದ್ರಿ 13.09.31988ರ ಮರಣಶಾಸನವನ್ನು ಗುರುತು ಮಾಡಲು ಕೇಳಿಕೊಂಡಿದ್ದು ವಾದಿ ಪರ ವಕೀಲರು ಅದಕ್ಕೆ ಆಕ್ಷೇಪ ವ್ಯಕ್ತಪಡಿಸಿರುತ್ತಾರೆ. ಈ ಸಂಬಂದ ವಾದಿ ಮತ್ತು ಪ್ರತಿವಾದಿ ಪರ ವಕೀಲರ ವಾದ ವಿವಾದ ಕೇಳಿದ್ದು ದಿಃ 16.08.2014ರಂದು ಈ ಸಾಕ್ಷಿಯು ನೀಡಿದ ಪಾಟೀಸವಾಲನ್ನು ಅವಲೋಕಿಸಿದಾಗ ಸದ್ರಿ 13.09.1988ರ ಮರಣಶಾಸನ ತಾನು ಹೆಚ್.ಎನ್.ಶೆಟ್ಟಿಯ ಕಚೇರಿಯಲ್ಲಿ ಓದಿದ ಮರಣಶಾಸನದ ಜೆರಾಕ್ಸ್ ಪ್ರತಿಯ ಮೂಲಪ್ರತಿ ಇರುತ್ತದೆ ಎಂಬುದನ್ನು ಒಪ್ಪಿಕೊಂಡಿರುವುದು ಕಂಡುಬರುತ್ತದೆ. ಆದ್ದರಿಂದ ಸದ್ರಿ ಮರಣಶಾಸನವನ್ನು ನಿ.ಡಿ-13 ಎಂದು ಗುರುತಿಸಲಾಯಿತು. ನಿ.ಡಿ-13ರ ಎಲ್ಲಾ ಪುಟಗಳಿಗೆ ಬೈಕು ಪೂಜಾರಿಯವರು ನನ್ನ ಸಮಕ್ಷಮ ತನ್ನ ಎಡಗೈ ಹೆಬ್ಬೆಟ್ಟಿನ ಗುರುತು ಹಾಕಿರುತ್ತಾರೆ ಎಂದರೆ ಸರಿ. ಹೆರ್ಗದಲ್ಲಿ ಸರ್ಕಾರಿ ಶಾಲೆ ಇದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಹೆರ್ಗದ ಹೆಚ್. ಅಣ್ಣಪ್ಪ ಶೆಟ್ಟಿ ಎಂಬುವವರು ಸಹಾ ನನಗೆ ಗೊತ್ತಿಲ್ಲ. ಅದೇ ರೀತಿ ಹೆಚ್. ಅಣ್ಣಪ್ಪ ಶೆಟ್ಟಿ ಅವರು ಹೆರ್ಗದ ಶೇಷ ಶೆಟ್ಟಿ ಅವರ ಮಗ ಎಂಬುದು ಸಹಾ ಗೊತ್ತಿಲ್ಲ. ಹೆಚ್. ಅಣ್ಣಪ್ಪ ಶೆಟ್ಟಿ ಅವರು ನಿ.ಡಿ-13 ಮರಣಶಾಸನಕ್ಕೆ ಬೈಕು ಪೂಜಾರಿಯವರ ಸಮಕ್ಷಮ ಸಹಿ ಮಾಡಿದ್ದು ಅದನ್ನು ಬೈಕು ಪೂಜಾರಿಯವರು ನೋಡಿರುತ್ತಾರೆ ಎಂಬುದು ನನಗೆ ಗೊತ್ತಿಲ್ಲ. ನಿ.ಡಿ-13 ಮರಣಶಾಸನಕ್ಕೆ ನಾನು 2ನೇ ಸಾಕ್ಷಿಯಾಗಿ ಸಹಿ ಮಾಡಿರುತ್ತೇನೆ ಎಂಬುದು ಸುಳ್ಳು. ಈಗ ನಿ.ಡಿ-13ರಲ್ಲಿರುವ ನಾನು ನೋಡುತ್ತಿರುವ ಸಹಿ ನನ್ನ ಸಹಿಯೇ ಆಗಿರುತ್ತದೆ. ಸಾಕ್ಷಿಯು ಅದನ್ನು ಒಪ್ಪಿಕೊಂಡಿದ್ದರಿಂದ ಅದನ್ನು ನಿ.ಡಿ-13(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಸ್ವಃಇಚ್ಛೆಯಿಂದ ಸದ್ರಿ ಸಹಿಯನ್ನು ನಾನು ಮದ್ರಾಸ್‌ನಲ್ಲಿ ಮಾಡಿರುತ್ತೇನೆ ಎಂದು ಹೇಳುತ್ತಾರೆ. ನಿ.ಡಿ-13(ಎ) ಸಹಿಯ ಕೆಳಗೆ ನನ್ನ ಹೆಸರು ಮತ್ತು

ವಿಳಾಸವನ್ನು ನಾನೇ ನನ್ನ ಕೈಬರಹದಲ್ಲಿ ಬರೆದಿರುತ್ತೇನೆ. ನನಗೆ ದಸ್ತಾವೇಜು ಮತ್ತು ಖಾಲಿ ಕಾಗದದ ವ್ಯತ್ಯಾಸ ಗೊತ್ತು. ನಾನು ಮದ್ರಾಸ್‌ನಲ್ಲಿದ್ದಾಗ ಪ್ರತಿವಾದಿ ನನಗೆ ಸೇರಿದ ಪರ್ಕಳದಲ್ಲಿರುವ ಮನೆಯನ್ನು ಬಾಡಿಗೆ ಕೊಡಬೇಕಾಗಿರುತ್ತದೆ. ಆ ಸಂಬಂದ ಬಾಡಿಗೆ ಕರಾರು ಮಾಡಬೇಕಾಗಿದ್ದು ನನ್ನ ಸಹಿ ಬೇಕು ಎಂದು ಹೇಳಿದ್ದರಿಂದ ನಾನು ಖಾಲಿ ಕಾಗದಕ್ಕೆ ನನ್ನ ಸಹಿ ಮಾಡಿದ್ದೆ. ನಾನು ಸಹಿ ಮಾಡಿದ ಖಾಲಿ ಕಾಗದದ ಜೊತೆ ಒಂದು ಲೆಡ್ಜರ್ ಮತ್ತು ಸ್ಟಾಂಪ್ ಪೇಪರ್ ಸಹಾ ಇತ್ತು. ಪರ್ಕಳದಲ್ಲಿರುವ ನನ್ನ ಮನೆಯ ಬಾಡಿಗೆದಾರರ ಹೆಸರು ನನಗೆ ಗೊತ್ತಿಲ್ಲ. ಪರ್ಕಳದ ನನ್ನ ಮನೆಯನ್ನು ಪ್ರತಿವಾದಿಯೇ ನೋಡಿಕೊಳ್ಳುತ್ತಿದ್ದ. ನನ್ನ ಮನೆಯನ್ನು ಯಾರಿಗೆಲ್ಲಾ ಬಾಡಿಗೆಗೆ ಕೊಟ್ಟಿದ್ದರು ಎಂಬುದು ಸಹಾ ಗೊತ್ತಿಲ್ಲ. ನಾನು ಏಪ್ರಿಲ್ 1988ರಲ್ಲಿ ಆ ರೀತಿ 3-4 ಖಾಲಿ ಕಾಗದಗಳಿಗೆ ಸಹಿ ಮಾಡಿರುತ್ತೇನೆ. ನಾನು ಸಹಿ ಮಾಡಿದ ಬೇರೆ ಕಾಗದಗಳ ಜೊತೆ ಸ್ಟಾಂಪ್ ಪೇಪರ್ ಇತ್ತೋ ಇಲ್ಲವೋ ನನಗೆ ಗೊತ್ತಿಲ್ಲ. ದಿಃ 04.03.2002ರ ಪ್ರಮಾಣಪತ್ರದ 3ನೇ ಖಂಡಿಕೆಯಲ್ಲಿ ನಾನು " I say that somewhere in the middle of Sep. 19978 the defendant approach me and asked me to sign a document as a witness". ಎಂದು ಹೇಳಿರುವುದು ತಪ್ಪು ಇರುತ್ತದೆ. ಆ ರೀತಿ ನಾನು ಹೇಳಿರುವುದಿಲ್ಲ. ತಪ್ಪು ಎಂದರೆ ನನ್ನ ಪ್ರಕಾರ ಸುಳ್ಳು ಎಂದು ಅರ್ಥ. ಪ್ರತಿವಾದಿ ಮದ್ರಾಸ್‌ಗೆ ಬರುವ ಮೊದಲು ನನಗೆ ಪತ್ರ ಬರೆದಿದ್ದರು. ಮದ್ರಾಸ್‌ಗೆ ಬರುತ್ತೇನೆ ಎಂದು ಪತ್ರ ಬರೆದುದನ್ನು ಬಿಟ್ಟರೆ ಪ್ರತಿವಾದಿ ನನ್ನ ಜೊತೆ ಬೇರೆ ಯಾವುದೇ ಪತ್ರ ವ್ಯವಹಾರಗಳನ್ನು ಇಟ್ಟುಕೊಂಡಿರಲಿಲ್ಲ. ನೀವು ಡ್ಯೂಟಿ ಮೇಲಿರುವಾಗಲೇ ನಾನು ಬರುತ್ತೇನೆ. ಆ ಅವಧಿಯಲ್ಲಿ ದಸ್ತಾವೇಜಿಗೆ ಸಹಿ ಮಾಡಬೇಕೆಂದು ಪ್ರತಿವಾದಿ ತಾನು ಬರೆದ ಪತ್ರದಲ್ಲಿ ತಿಳಿಸಿದ್ದರು. ಖಾಲಿ ಪತ್ರಕ್ಕೆ ಸಹಿ ಪಡೆದುಕೊಂಡ ದಿನವೇ ಪ್ರತಿವಾದಿ ವಾಪಾಸ್ಸು ಮದ್ರಾಸ್‌ನಿಂದ ಉಡುಪಿಗೆ ಹೋಗಿರುತ್ತಾರೆ. ಬೈಕು ಪೂಜಾರಿಯವರು ತಾನು ಮರಣಶಾಸನ ಬರೆಯುತ್ತಿದ್ದೇನೆ ಅದಕ್ಕೆ ನೀವು ಸಾಕ್ಷಿಯಾಗಿ ಸಹಿ ಮಾಡಬೇಕು ಎಂದು ಹೇಳಿದ್ದರಿಂದ ದದಿಃ 13.09.1988 ರಲ್ಲಿ ನಾನು ಉಡುಪಿಗೆ ಬಂದಿದ್ದೆ ಎಂಬುದು ಸುಳ್ಳು. ಪ್ರತಿವಾದಿ, ನಾನು ಮದ್ರಾಸ್‌ನಲ್ಲಿ ಸಹಿ ಮಾಡಿದ ಖಾಲಿ ಪೇಪರ್‌ನ್ನು ದುರುಪಯೋಗ ಪಡಿಸಿಕೊಂಡು ನಿ.ಡಿ-13 ಮರಣಶಾಸನವನ್ನು ಸೃಷ್ಟಿಸಿಕೊಂಡಿರುತ್ತಾನೆ. ಸೆಪ್ಟೆಂಬರ್ 1988ರಲ್ಲಿ ನಾನು ಖಾಲಿ ಪೇಪರ್‌ಗೆ ಸಹಿ

ಮಾಡಿಲ್ಲ. ಆದರೆ ಏಪ್ರಿಲ್ 1988ರಲ್ಲಿ ಮದ್ರಾಸ್‌ನಲ್ಲಿ ಖಾಲಿ ಪೇಪರ್‌ಗೆ ಸಹಿ ಮಾಡಿದ್ದೆ. ನಾನು ಏಪ್ರಿಲ್ 1988ರಲ್ಲಿ ಮದ್ರಾಸ್‌ನಲ್ಲಿ ಖಾಲಿ ಪೇಪರ್‌ಗೆ ಸಹಿ ಮಾಡಿದ ನಂತರ 1988ರ ಆಗಸ್ಟ್ 2ನೇ ವಾರದವರೆಗೆ ನಾನು ಊರಿಗೆ ಬಂದಿರಲಿಲ್ಲ. ಆದರೆ ಆಗಸ್ಟ್ 2ನೇ ವಾರದಲ್ಲಿ ಅನಾರೋಗ್ಯದ ನಿಮಿತ್ತ ಊರಿಗೆ ಬಂದಿದ್ದೆ. ಪ್ರತಿವಾದಿ ಮದ್ರಾಸ್‌ಗೆ ಬಂದಿದ್ದ ಸಂದರ್ಭದಲ್ಲಿ ಆತನ ಮೇಲೆ ನನಗೆ ಸಂಪೂರ್ಣ ವಿಶ್ವಾಸ ಇತ್ತು. ಪವರ್ ಆಫ್ ಅಟಾರ್ನಿ ಏನು ಎಂಬುದು ನನಗೆ ಗೊತ್ತು. ನಾನು ಪ್ರತಿವಾದಿಗೆ ಯಾವುದೇ ಜಿಪಿಎ ಯನ್ನು ಬರೆದುಕೊಟ್ಟಿಲ್ಲ. ಆತ ನನ್ನ ಹೆಂಡತಿಯ ತಮ್ಮ ಆಗಿದ್ದರಿಂದ ಆತನ ಮೇಲೆ ವಿಶ್ವಾಸವಿಟ್ಟು ಖಾಲಿ ಪೇಪರ್‌ಗೆ ಸಹಿ ಮಾಡಿದ್ದೆ. ಪ್ರತಿವಾದಿಯ ಮೇಲೆ ನಾನು ಸಂಪೂರ್ಣಜ ವಿಶ್ವಾಸ ಇಟ್ಟಿದ್ದರಿಂದ ಜಿಪಿಎ ಬರೆದುಕೊಡಲಿಲ್ಲ. ಪರ್ಕಳದಲ್ಲಿರುವ ನನ್ನ ಮನೆಯನ್ನು ಬಾಡಿಗೆಗೆ ಕೊಡುವುದು, ಬಾಡಿಗೆದಾರರಿಂದ ಬಾಡಿಗೆ ವಸೂಲು ಮಾಡಿ ಅದನ್ನು ನನ್ನ ಬ್ಯಾಂಕ್ ಖಾತೆಗೆ ಹಾಕುವುದು ಮತ್ತು ಮನೆಯ ವಿದ್ಯುಚ್ಛಕ್ತಿ ಶುಲ್ಕವನ್ನು ಕಟ್ಟಲು ಪ್ರತಿವಾದಿಗೆ ನಾನು ಮೌಖಿಕವಾಗಿ ಅಧಿಕಾರ ಕೊಟ್ಟಿದ್ದೆ. ನಾನು ಊರಿಗೆ ಬಂದಾಗ ಬಾಡಿಗೆ ಹಣವನ್ನು ಪ್ರತಿವಾದಿ ನನಗೆ ಕೊಡುತ್ತಿದ್ದರು. ನಾನು ಬಾಡಿಗೆ ಸ್ವೀಕರಿಸಿದ ಸಂಬಂದ ರಶೀದಿ ಕೊಡುತ್ತಿರಲಿಲ್ಲ. 4 ಜನ ಬಾಡಿಗೆದಾರರು ಎಷ್ಟು ಬಾಡಿಗೆ ಕೊಡುತ್ತಿದ್ದರು ಎಂಬುದು ನನಗೆ ಗೊತ್ತಿಲ್ಲ. 1988ರಲ್ಲಿ ಪರ್ಕಳದ ಸಿಂಡಿಕೇಟ್ ಬ್ಯಾಂಕ್‌ನಲ್ಲಿ ನನ್ನ ಖಾತೆ ಇತ್ತು. ಬಾಡಿಗೆ ಹಣವನ್ನು ನನ್ನ ಬ್ಯಾಂಕ್ ಖಾತೆಗೆ ಜಮಾ ಮಾಡುವಂತೆ ಪ್ರತಿವಾದಿಗೆ ನಾನು ಹೇಳಿರಲಿಲ್ಲ. 04.03.2002ರ ಪ್ರಮಾಣಪತ್ರದ ಖಂಡಿಕೆ 4 ರಲ್ಲಿ ಹೇಳಿರುವುದು ಸುಳ್ಳು ಇರುತ್ತದೆ. ನಾನು ಖಂಡಿಕೆ 4 ರಲ್ಲಿ ಹೇಳಿದಂತೆ ವಕೀಲರಿಗೆ ಹೇಳಿಲ್ಲ. ವಾದಿಗಳ ಪರವಾಗಿ ಹೆಚ್.ಎನ್.ಶೆಟ್ಟಿ ವಕೀಲರನ್ನು ನೇಮಿಸಿದ್ದು ನಾನು ಮತ್ತು ಸಡ್ಡುಗ ಶೀನು ಪೂಜಾರಿ ಎಂದರೆ ಸರಿಯಲ್ಲ. ಹೆಚ್.ಎನ್.ಶೆಟ್ಟಿ ವಕೀಲರಿಗೆ ವಾದಿಗಳ ಮೇಲಾಗಲೀ, ನನ್ನ ಮೇಲಾಗಲೀ ಅಥವಾ ಶೀನು ಪೂಜಾರಿ ಮೇಲಾಗಲೀ ಯಾವುದೇ ದ್ವೇಷ ಇರಲಿಲ್ಲ. ವಾದಿಗಳ ಹಿತಾಸಕ್ತಿಗೆ ವಿರುದ್ದವಾಗಿ ಹೆಚ್.ಎನ್.ಶೆಟ್ಟಿ ವಕೀಲರು ನಡೆದುಕೊಂಡಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ದಿಃ 13.09.1988ರಂದು ಮರಣಶಾಸನ ಬರೆಯುವ ಸಂಬಂದ ನಾನು, ಹೆಚ್ ಅಣ್ಣಪ್ಪ ಶೆಟ್ಟಿ ಮತ್ತು ಬೈಕು ಪೂಜಾರಿ ಪತ್ರ ಬರಹಗಾರರಾದ ಟಿ ಶ್ರೀಕಾಂತ್ ಹೊಳ್ಳ ಅವರ ಕಚೇರಿಗೆ ಹೋಗಿದ್ದೆವು ಎಂಬುದು ಸುಳ್ಳು. ನಿ.ಡಿ-13 ಮರಣಶಾಸನದ ಕರಡು ತಯಾರಿಸಲು ಮಾಹಿತಿಯನ್ನು

ಶ್ರೀಕಾಂತ್ ಹೊಳ್ಳ ಅವರಿಗೆ ಬೈಕು ಪೂಜಾರಿಯವರೇ ಕೊಟ್ಟಿದ್ದರು ಎಂಬುದು ಸುಳ್ಳು. ಕರಡು ಪ್ರತಿ ತಯಾರಿಸಿದ ನಂತರ ಶ್ರೀಕಾಂತ್ ಹೊಳ್ಳ ಅವರು ನನ್ನ ಮತ್ತು ಅಣ್ಣಪ್ಪ ಶೆಟ್ಟಿಯವರ ಸಮಕ್ಷಮ ಬೈಕು ಪೂಜಾರಿಯವರಿಗೆ ಓದಿ ಹೇಳಿದರು ಎಂಬುದು ಗೊತ್ತಿಲ್ಲ. ಕರಡು ಪ್ರತಿ ಓದಿ ಹೇಳಿದ ನಂತರ ಸರಿ ಇದೆ ಎಂದು ಒಪ್ಪಿಕೊಂಡು ಬೈಕು ಪೂಜಾರಿಯವರು ಮರಣಶಾಸನ ತಯಾರು ಮಾಡಲು ಶ್ರೀಕಾಂತ್ ಹೊಳ್ಳ ಅವರಿಗೆ ಹೇಳಿದರು ಎಂಬುದು ಗೊತ್ತಿಲ್ಲ. ನಂತರ ಶ್ರೀಕಾಂತ್ ಹೊಳ್ಳ ಅವರು ಮರಣಶಾಸನವನ್ನು ಸಿದ್ಧಪಡಿಸಿದ್ದು ಅದಕ್ಕೆ ಮೊದಲು ನಾನು, ನನ್ನ ನಂತರ ಅಣ್ಣಪ್ಪ ಶೆಟ್ಟಿಯವರು ಸಾಕ್ಷಿಯಾಗಿ ರುಜು ಮಾಡಿದರು ಎಂಬುದು ಸುಳ್ಳು. ನಿ.ಡಿ-13ರ 5 ಪುಟಗಳಿಗೆ ಬೈಕು ಪೂಜಾರಿಯವರು ತನ್ನ ಎಡಗೈ ಹೆಬ್ಬೆಟ್ಟು ಹಾಕಿದ್ದನ್ನು ನಾನು ಖುದ್ದು ನೋಡಿರುತ್ತೇನೆ ಎಂಬುದು ಸುಳ್ಳು. ನಾನು ಮತ್ತು ಅಣ್ಣಪ್ಪ ಶೆಟ್ಟಿಯವರು ಮರಣಶಾಸನಕ್ಕೆ ಸಹಿ ಮಾಡಿದ ನಂತರ ಪುನಃ ಶ್ರೀಕಾಂತ್ ಹೊಳ್ಳ ಅವರು ಮರಣಶಾಸನದ ಸಂಗತಿಗಳನ್ನು ಬೈಕು ಪೂಜಾರಿಯವರಿಗೆ ಓದಿ ಹೇಳಿರುತ್ತಾರೆ ಎಂಬುದು ಗೊತ್ತಿಲ್ಲ. ಆ ರೀತಿ ಓದಿ ಹೇಳುವಾಗ ನಾನು ಮತ್ತು ಅಣ್ಣಪ್ಪ ಶೆಟ್ಟಿ ಹಾಜರಿದ್ದೆ ಎಂಬುದು ಸುಳ್ಳು. ನಂತರ ಶ್ರೀಕಾಂತ್ ಹೊಳ್ಳ ಅವರು ಮರಣಶಾಸನ ಬರೆದ ಸಂಬಂದ ತನ್ನ ಸಹಿ ಮತ್ತು ಸೀಲು ಹಾಕಿದರು ಎಂಬುದು ಸುಳ್ಳು.

ಉಡುಪಿಯಲ್ಲಿ ಉಪನೋಂದಣಾಧಿಕಾರಿಗಳ ಕಚೇರಿ ಎಲ್ಲಿದೆ ಎಂಬುದು ಗೊತ್ತು. ಉಪನೋಂದಣಾಧಿಕಾರಿ ಕಚೇರಿ ನ್ಯಾಯಾಲಯದಿಂದ ಹತ್ತಿರದಲ್ಲೇ ಇರುತ್ತದೆ. ಶ್ರೀಕಾಂತ್ ಹೊಳ್ಳ ಅವರು ಮರಣಶಾಸನ ಬರೆದ ನಂತರ ಅದರ ನೋಂದಾವಣಿಗಾಗಿ ಬೈಕು ಪೂಜಾರಿ ಮತ್ತು ನಮ್ಮನ್ನು ಉಪನೋಂದಣಾಧಿಕಾರಿಗಳ ಕಚೇರಿಗೆ ಕರೆದುಕೊಂಡು ಹೋದರು ಎಂಬುದು ಸುಳ್ಳು. ಉಪನೋಂದಣಾಧಿಕಾರಿಗಳ ಕಚೇರಿಯಲ್ಲಿ ಮರಣಶಾಸನವನ್ನು ನೋಂದಣಿ ಮಾಡಿಸಲು ಬೈಕು ಪೂಜಾರಿಯವರೇ ಹಾಜರುಪಡಿಸಿರುತ್ತಾರೆ ಎಂಬುದು ನನಗೆ ಗೊತ್ತಿಲ್ಲ. ಬೈಕು ಪೂಜಾರಿಯವರು ಉಪನೋಂದಣಾಧಿಕಾರಿಗಳ ಮುಂದೆ ನಿ.ಡಿ-13 ಮರಣಶಾಸನವನ್ನು ತಾನು ಬರೆದಿದ್ದು ಎಂದು ಒಪ್ಪಿಕೊಂಡಿರುತ್ತಾರೆ ಎಂಬುದು ನನಗೆ ಗೊತ್ತಿಲ್ಲ. ಬೈಕು ಪೂಜಾರಿಯವರು ಉಪನೋಂದಣಾಧಿಕಾರಿಗಳ ಸಮಕ್ಷಮ ತನ್ನ ಎಡಗೈ ಹೆಬ್ಬೆಟ್ಟಿನ ಗುರುತು ಹಾಕಿದ್ದು ಅವುಗಳನ್ನು ಉಪನೋಂದಣಾಧಿಕಾರಿಗಳು ಮರಣಶಾಸನ ಬರೆದುಕೊಟ್ಟವರ ಹೆಬ್ಬೆಟ್ಟಿನ ಗುರುತುಗಳೆಂದು

ದೃಢೀಕರಿಸಿರುತ್ತಾರೆ ಎಂಬುದು ಗೊತ್ತಿಲ್ಲ. ಉಪನೋಂದಣಾಧಿಕಾರಿಗಳ ಕಚೇರಿಯಲ್ಲಿ ಬೈಕು ಪೂಜಾರಿಯವರನ್ನು ಗುರುತು ಬಲ್ಲ ಸಾಕ್ಷಿಯಾಗಿ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಈಗ ಒಂದು ಸಹಿಯನ್ನು ತೋರಿಸಿ ಅದು ನಿಮ್ಮ ಸಹಿ ಇದ್ದು ಅದನ್ನು ನೀವು ಗುರುತು ಬಲ್ಲ ಸಾಕ್ಷಿಯಾಗಿ ಉಪನೋಂಣಾಧಿಕಾರಿಗಳ ಕಚೇರಿಯಲ್ಲಿ ಮಾಡಿರುತ್ತೀರಿ ಮತ್ತು ನಿಮ್ಮ ಹೆಸರು ಮತ್ತು ತಂದೆಯ ಹೆಸರನ್ನು ಸಹಾ ನಿಮ್ಮ ಕೈಬರಹದಲ್ಲಿ ಬರೆದಿರುತ್ತೀರಿ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಸದ್ರಿ ಸಹಿ ನನ್ನ ಸಹಿ ಇರುತ್ತದೆ ಎಂದು ಒಪ್ಪಿಕೊಂಡಿರುತ್ತಾರೆ. ಆದರೆ ಸದ್ರಿ ಸಹಿಯನ್ನು ನಾನು ಮದ್ರಾಸ್‌ನಲ್ಲಿ ಮಾಡಿರುತ್ತೇನೆ ಎಂದು ಹೇಳಿರುತ್ತಾರೆ. ಸಹಿಯನ್ನು ಸಾಕ್ಷಿ ಒಪ್ಪಿಕೊಂಡಿದ್ದರಿಂದ ಅದನ್ನು ನಿ.ಡಿ-13(ಬಿ) ಎಂದು ಗುರುತಿಸಲಾಯಿತು. ನನಗೆ ಟಿ. ಶ್ರೀಕಾಂತ್ ಹೊಳ್ಳ ಅವರ ತಂದೆ ಟಿ. ಶ್ರೀನಿವಾಸ ಹೊಳ್ಳ ಅವರು ಗೊತ್ತಿಲ್ಲ. ನಿ.ಡಿ-13 ಮರಣಶಾಸನ ಕಾನೂನಿಗನುಸಾರವಾಗಿ ನೋಂದಾವಣಿಯಾಗಿರುತ್ತದೆ ಎಂಬುದು ನನಗೆ ಗೊತ್ತಿಲ್ಲ. ನನ್ನ ಹೆಂಡತಿಯ ತಾಯಿ ಲಕ್ಷ್ಮೀ ಪೂಜಾರ್ತಿಯವರಿಗೆ ಹೆರ್ಗದಲ್ಲಿ ಸಾಕಷ್ಟು ಆಸ್ತಿಗಳು ಇದ್ದವು ಎಂಬುದು ನನಗೆ ಗೊತ್ತಿಲ್ಲ. ನನ್ನ ಹೆಂಡತಿಯ ತಾಯಿ ತನಗೆ ಸೇರಿದ ಆಸ್ತಿಗಳನ್ನು ತನ್ನ ಮಕ್ಕಳಿಗೆ ಹಂಚಿಕೊಟ್ಟಿರುತ್ತಾರೆ ಎಂಬುದು ನನಗೆ ಗೊತ್ತಿಲ್ಲ. ಬೈಕು ಪೂಜಾರಿ ಅವರಿಗೆ ಸೇರಿದ ಚರ ಸ್ವತ್ತುಗಳು ಇತ್ತು. ಆದರೆ ಏನೆಲ್ಲಾ ಚರ ಸ್ವತ್ತುಗಳು ಇದ್ದವು ಎಂಬುದು ಗೊತ್ತಿಲ್ಲ. ನನಗೆ ಮಧ್ಯಪಾನ ಮಾಡುವ ಅಭ್ಯಾಸ ಇಲ್ಲ. ನಾನು, ಬೈಕು ಪೂಜಾರಿ ಮತ್ತು ಮರಣಶಾಸನದ ಸಾಕ್ಷಿದಾರರಾದ ಅಣ್ಣಪ್ಪ ಶೆಟ್ಟಿಯವರು ಒಟ್ಟಿಗೆ ಮಧ್ಯಪಾನ ಮಾಡಲು ಹೋಗುತ್ತಿರಲಿಲ್ಲ. ಈ ವ್ಯಾಜ್ಯದ ಆಸ್ತಿಗಳಿಗೂ ನನಗೂ ಯಾವುದೇ ಸಂಬಂದವಿಲ್ಲ. ನೀನೇ ಹೋಗಿ ಸಾಕ್ಷಿ ನುಡಿಯುವಂತೆ ನನ್ನ ಹೆಂಡತಿಗೆ ನಾನು ಹೇಳಿಲ್ಲ.

ಪ್ರಶ್ನೆಃ ನಿಮ್ಮ ಹೆಂಡತಿ ಈ ಕೇಸಿನಲ್ಲಿ 4ನೇ ವಾದಿಯಾಗಿದ್ದು ನಿಮ್ಮ ಹೆಂಡತಿ ಮತ್ತು ಇತರೇ ವಾದಿಗಳು ವಾದ ಪತ್ರದಲ್ಲಿ ನಿಮಗೆ ಮತ್ತು ಮರಣಶಾಸನಕ್ಕೆ ಸಾಕ್ಷಿಯಾಗಿರುವ ಅಣ್ಣಪ್ಪ ಶೆಟ್ಟಿಯವರಿಗೆ ಬೈಕು ಪೂಜಾರಿಯವರು ಮಧ್ಯಪಾನ ಮಾಡಿಸಿ ಮರಣಶಾಸನಕ್ಕೆ ಸಹಿ ತೆಗೆದುಕೊಂಡಿರುತ್ತಾರೆ ಎಂದು ಕೇಳಿದ್ದು ಸದ್ರಿ ಪ್ರಶ್ನೆಯನ್ನು ಈ ಸಾಕ್ಷಿಗೆ ಕೇಳಲು ಬರುವುದಿಲ್ಲ. ಕಾರಣ ಈ ಸಾಕ್ಷಿ ಕೇವಲ ಮರಣಶಾಸನದ ಸಾಕ್ಷಿಯಾಗಿರುವುದರಿಂದ ಮರಣಶಾಸಕ್ಕೆ ಸಂಬಂದಪಟ್ಟಂತೆ ಮತ್ತು ಸಾಕ್ಷಿ ಪ್ರಮಾಣಪತ್ರ ಸಲ್ಲಿಸಿದ ಬಗ್ಗೆ ಮಾತ್ರ ಪಾಟೀಸವಾಲು ಮಾಡಬೇಕಾಗಿದ್ದು ಸದ್ರಿ ಪ್ರಶ್ನೆಯನ್ನು ತಿರಸ್ಕರಿಸಲಾಯಿತು.

ಬೈಕು ಪೂಜಾರಿಯವರು ಪ್ರತಿವಾದಿಗೆ ಮಾತ್ರ ನಿ.ಡಿ-13 ಮರಣಶಾಸನದ ಮೂಲಕ ತನ್ನ ಆಸ್ತಿಗಳನ್ನು ನೀಡಲು ಕಾರಣ ನನಗೆ ಗೊತ್ತಿಲ್ಲ. ನನ್ನ ಹೆಂಡತಿ ಮತ್ತು ಅತ್ತೆಯನ್ನು ನಿ.ಡಿ-13ರ ಮರಣಶಾಸನದ ವಿಚಾರವಾಗಿ ಕೇಳಿಲ್ಲ. ಈ ಕೇಸಿನ ವಾದಪತ್ರವನ್ನು ನಾನು ಓದಿರುತ್ತೇನೆ.

ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಸಮಯ ಕೇಳಿದ್ದು, ಸಮಯ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿದರು.

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು, ಉಡುಪಿ.